ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
**ಕಾರ್ಯಪಾಲಕ ಇಂಜಿನೀಯರ್‌ರವರ ಕಾರ್ಯಾಲಯ, ದಾವಣಗೆರೆ.**

ವಿಭಾಗ ಕಚೇರಿ, ಪಿ.ಬಿ. ರಸ್ತೆ,
ದಾವಣಗೆರೆ-577 002.

ದೂರವಾಣಿ : 08192 234951, 231530
ಫ್ಯಾಕ್ಸ್ : 08192 234951
ಇ-ಮೇಲ್ : eedvg@kpwd.gov.in

ಸಂ:ಕಾಪಾಅ/ಲೋಇವಿದಾ/ಎಇ-1/2021-22 748 ದಿನಾಂಕ : 27 JUL 2021

ಅಧ್ಯಕ್ಷರು
ಶ್ರೀ ಭಗವಾನ್ ಮಹಾವೀರ್ ಎಜುಕೇಷನಲ್ ಟ್ರಸ್ಟ್,
ಜೈನ್ ವಿದ್ಯಾಲಯ,
ಡೋರ್.ನಂ. 3348/182/1-3 ಮತ್ತು 183,
ಶಾಮನೂರು ಗ್ರಾಮ,
ದಾವಣಗೆರೆ - ಇವರಿಗೆ.

ಮಾನ್ಯರೇ

ವಿಷಯ : ಕಾಲೇಜು ಕಟ್ಟಡಕ್ಕೆ ಕಟ್ಟಡ ಸುರಕ್ಷತೆ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 19.09.2020ರಂದು ನಡೆದ ಸಭೆಯ ನಡವಳಿಗಳು.
2) ಸರ್ಕಾರದ ಕಾರ್ಯದರ್ಶಿಗಳು , ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರ ಪತ್ರ ದಿನಾಂಕ : ಲೋಇ/59/ಬಿಇಡಿ/2019 ದಿನಾಂಕ : 29.10.2020.
3) ತಮ್ಮ ಕಚೇರಿ ಪತ್ರ ದಿನಾಂಕ : 22.07.2021.
4) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ ಉಪವಿಭಾಗ, ದಾವಣಗೆರೆ ಇವರ ಪತ್ರ ಸಂ : 434/2021-22 ದಿನಾಂಕ: 26.07.2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಭಗವಾನ್ ಮಹಾವೀರ್ ಎಜುಕೇಷನಲ್ ಟ್ರಸ್ಟ್, ದಾವಣಗೆರೆ ಸಂಸ್ಥೆಯ ವತಿಯಿಂದ ಜೈನ್ ವಿದ್ಯಾಲಯ (ಸಿಬಿಎಸ್‌ಇ), ದಾವಣಗೆರೆ ಕಟ್ಟಡದಲ್ಲಿ ನಡೆಸಲಾಗುತ್ತಿದ್ದು, ಸದರಿ ಕಟ್ಟಡಕ್ಕೆ ರಾಷ್ಟ್ರೀಯ ಕಟ್ಟಡದ ನಿಯಮಾವಳಿಗಳನ್ವಯ ಕಟ್ಟಡವನ್ನು ಪರಿಶೀಲಿಸಿ ಧೃಢೀಕರಣ ಪತ್ರ ನೀಡುವಂತೆ ಉಲ್ಲೇಖ (4)ರ ತಮ್ಮ ಕಚೇರಿ ಪತ್ರದಲ್ಲಿ ಕೋರಲಾಗಿರುತ್ತದೆ. ಉಲ್ಲೇಖ (1)ರ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 19.09.2020ರಂದು ನಡೆದ ಸಭೆಯ ನಡವಳಿಗಳಲ್ಲಿ "ಈಗಾಗಲೇ ನಿರ್ಮಾಗೊಂಡು ಅಸ್ಥಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural evalution) ಮೌಲ್ಯಮಾಪನ ಮಾಡಿಸಿ National buidling code ಮಾನದಂಡಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದುಕೊಳ್ಳತಕ್ಕದ್ದು" ಎಂದು ನಿರ್ದೇಶಿಸಲಾಗಿರುತ್ತದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ ಉಪವಿಭಾಗ, ದಾವಣಗೆರೆ ಇವರು ಶ್ರೀ ಭಗವಾನ್ ಮಹಾವೀರ್ ಎಜುಕೇಷನಲ್ ಟ್ರಸ್ಟ್, ದಾವಣಗೆರೆ ಸಂಸ್ಥೆಯ ವತಿಯಿಂದ ಜೈನ್ ವಿದ್ಯಾಲಯ (ಸಿಬಿಎಸ್‌ಇ), ದಾವಣಗೆರೆ ಕಟ್ಟಡಕ್ಕೆ ದಿನಾಂಕ : 24.07.2021ರಂದು ಭೇಟಿ ನೀಡಿ ಕಟ್ಟಡದ ವಿನ್ಯಾಸ ಮತ್ತು ನಕ್ಷೆಗಳನುಸಾರ ಪರಿವೀಕ್ಷಿಸಿರುತ್ತಾರೆ. ಸದರಿ ಕಟ್ಟಡವನ್ನು NBC 2016ರ ಮಾನದಂಡಗಳ ಅನುಸಾರ ನಿರ್ಮಿಸಲಾಗಿದ್ದು, ಕಟ್ಟಡವು ತಾಂತ್ರಿಕವಾಗಿ ಸದೃಡವಾಗಿದೆ ಎಂದು ಧೃಢೀಕರಿಸಿ ಉಲ್ಲೇಖ (4)ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಇ ಉಪವಿಭಾಗ, ದಾವಣಗೆರೆ ಇವರು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ವಯ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್,
ಲೋಕೊಪಯೋಗಿ ಇಲಾಖೆ ವಿಭಾಗ, ದಾವಣಗೆರೆ.